**<u>ಸಾಕ್ಷಿಯನ್ನು ದಿನಾಂಕಃ 18-07-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಅರ್.ಜಿ.ಪಿ.ವಕೀಲರವರಿಂದಃ</u>**

ನಾನು ವ್ಯವಸಾಯ ಮತ್ತು ವಕೀಲಿಕೆ ಮಾಡುತ್ತೇನೆ ಕಳೆದ 8 ವರ್ಷದಿಂದ ವಕೀಲ ವೃತ್ತಿಯಲ್ಲಿ ಇದ್ದೆನೆ. ಸನದ್ದನ್ನು 2001 ರಲ್ಲಿ ಪಡೆದಿದ್ದೇನೆ. ನಾನು ಕೂಡ್ಲಿಗಿ ಸಂಘದ ಸದಸ್ಯನಾಗಿದ್ದೇನೆ. ಅಲ್ಲಿನ ಸದಸ್ಯತ್ವವನ್ನು 2012 ರಲ್ಲಿ ಪಡೆದಿದ್ದೇನೆ. ವಾದಿ ನನ್ನ ಪತ್ನಿಯ ಅಕ್ಕ ಅಂದರೆ ಸರಿ. ಅವರ ಮನೆತನಕ್ಕೆ ಸಂಬಂಧಿಸಿದ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ ಅಂದರೆ ಸರಿಯಲ್ಲ. ವಾದಿಯ ಗಂಡ 02.02.2013 ರಂದು ಮೃತ ಪಟ್ಟಿರುವರು. 2013 ರ ನಂತರ 1 ವರ್ಷದ ಅವದಿಯ ವರೆಗೆ ವಾದಿಯು ನಮ್ಮ ಮನೆಯಲ್ಲಿ ವಾಸವಾಗಿದ್ದರು. ತದನಂತರ ಆಕೆ ಮೃತ ಪಡುವ ವರೆಗೆ ನಮ್ಮೊಂದಿಗೆ ವಾಸ ಇದ್ದರು. ಮೃತ ವಾದಿ ಕುಸುಮ ದಾವಣಗೆರೆಯಲ್ಲಿರುವ ಬಾಡಿಗೆ ಮನೆಯಲ್ಲಿ ತೀರಿಕೊಂಡರು. ಆ ಮನೆಯನ್ನು ಮೃತ ವಾದಿ ಕುಸುಮಾ ಅವರೇ ಬಾಡಿಗೆಗೆ ತೆಗೆದುಕೊಂಡಿದ್ದರು. ಮೃತ ಪಡುವ ಮೊದಲು ಒಂದು ತಿಂಗಳ ಕಾಲ ಆಕೆ ಆ ಮನೆಯಲ್ಲಿ ವಾಸ ಇದ್ದಳು. ಆಕೆಯ ಆರೋಗ್ಯ ಸ್ತಿತಿ ಚೆನ್ನಾಗಿತ್ತು. ಆಕೆಗೆ ಬಿ.ಪಿ ಶುಗರ್ ಇರಲಿಲ್ಲ. ಆಕೆಗೆ ಎದೆ ನೋವು ಕಾಣಿಸಿಕೊಂಡ ಕಾರಣ ಒಂದು ತಿಂಗಳ ಮಟ್ಟಿಗೆ ಪ್ರತ್ಯೇಕ ಬಾಡಿಗೆ ಮನೆಯಲ್ಲಿ ವಾಸ ಇದ್ದಳು.

ಈ ಪಾಲು ವಿಭಾಗ ಕೇಸು ದಾಖಲಿಸುವ ಮೊದಲು ಸಾದಕ ಬಾದಕಗಳಿಗೆ ಸಂಬಂದಿಸಿದಂತೆ ಮೃತ ವಾದಿ ಕುಸುಮ ನನ್ನ ಬಳಿ ಚರ್ಚೆ ಮಾಡಿರುವುದಿಲ್ಲ. ಈ ದಾವೆಯನ್ನು ಸಲ್ಲಿಸಿದ ನಂತರ ನಾನು ಆಕೆಯೊಂದಿಗೆ ಈ ನ್ಯಾಯಲಯಕ್ಕೆ ಈ ಕೇಸಿಗೆ ಸಂಬಂದಿಸಿದಂತೆ ಬಂದಿರುವುದಿಲ್ಲ. ನಾನು ಹಲವಾರು ಬಾರಿ ಇದೇ ಕೇಸಿಗೆ ನ್ಯಾಯಾಲಯಕ್ಕೆ ಬಂದಿದ್ದರೂ ಸಹಿತ ಬಂದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ಹಾಗೂ ಕುಸುಮಾ ಇವರ ಸಂಬಂದ ಚೆನ್ನಾಗಿತ್ತು. ನನ್ನ ಪತ್ನಿ ಮತ್ತು ಕುಸುಮಾ ವಿಶ್ವಾಸದಲ್ಲಿದ್ದರು. ಕುಸುಮಾ ಇವರ ಗಂಡ ಕೊಟ್ಟೂರು ಗೌಡ್ರು ಇವರಿಗೆ ಶುಗರ್ ಇತ್ತು ಅಂದರೆ ಸರಿಯಲ್ಲ. ಕುಸುಮಾ ಇವರು ಸಹ ಬಪಿ ಶುಗರ್ ಪೆಶ್ಡಿಟ್ ಆಗಿದ್ದರು ಅಂದರೆ ಸರಿಯಲ್ಲ. ನಾನು ಸತ್ಯವನ್ನು ಮರೆ ಮಾಚುತ್ತಿದ್ದೇನೆ ಅಂದರೆ

ಸರಿಯಲ್ಲ. ಕುಸುಮಾ ಇವರು ವಿಲ್ಲಿ ಬರೆದ ವಿಚಾರ ನನಗೆ ಆಕೆ ಮೃತ ಪಟ್ಟ ನಂತರ ಗೊತ್ತಾಗಿರುತ್ತದೆ ಅಲ್ಲಿಯವರೆಗೆ ಗೊತ್ತಾಗಿರುವುದಿಲ್ಲ. ಕುಸುಮಾ ಇವರು ಮೃತ ಪಟ್ಟ ನಂತರ ಮನೆ ಕ್ಲೀನ್ ಮಾಡುವಾಗ ವಿಲ್ಲು ಇರುವುದು ನನಗೆ ಗೊತ್ತಾಗಿರುತ್ತದೆ. ವಿಲ್ಲಿನೊಂದಿಗೆ ಬೇರೆ ಯಾವುದೇ ದಾಖಲೆಗಳು ಸಿಕ್ಕಿರುವುದಿಲ್ಲ. ಕುಸುಮಾ ಇವರು ದಾವೆಯನ್ನು ಸಲ್ಲಿಸಿದ ವಿಚಾರ ಮತ್ತು ಯಾವ ವಕೀಲರನ್ನು ನೇಮಿಸಿಕೊಂಡಿದ್ದ ವಿಚಾರ ನನಗೆ ನಂತರದ ದಿನಗಳಲ್ಲಿ ಗೊತ್ತಾಗಿರುತ್ತದೆ.

ವಿಲ್ಲು ನನಗೆ ಸಿಕ್ಕ ನಂತರ ನಾನು ಅದನ್ನು ಓದಿ ತಿಳಿದುಕೊಂಡಿದ್ದೇನೆ. ಆ ವಿಲ್ಲಿಗೆ ಸಾಕ್ಷಿದಾರರಾಗಿ ಕಲ್ಲಪ್ಪ ಮತ್ತು ನಾಗಪ್ಪ ಎಂಬ ಹರಕನಾಳು ಗ್ರಾಮದ ನಿವಾಸಿಗಳು ಸಹಿ ಮಾಡಿರುವರು. ನನಗೆ ಅವರ ಪರಿಚಯ ಇರುವುದಿಲ್ಲ. ಬೆನಕನಹವಳ್ಳಿಗೂ ಹರಕನಾಳಿಗೂ 15 ಕಿಮಿ ಅಂತರ ಇರುವುದು. ಸದರಿ ಸಾಕ್ಷಿದಾರರು ನಮಗೆ ಸಂಬಂಧಿಕರಾಗಿರುವುದಿಲ್ಲ. ಅವರು ನನಗೆ ಪರಿಚಯಸ್ತರೂ ಆಗಿರುವುದಿಲ್ಲ. ಕುಸುಮನ ಬಗ್ಗೆಯಾಗಲೀ ನಮ್ಮ ಮನೆತನದ ಬಗ್ಗೆ ಸದರಿ ಸಾಕ್ಷಿದಾರರಿಗೆ ಯಾವುದೇ ಮಾಹಿತಿ ಇರುವುದಿಲ್ಲ ಅಂದರೆ ಕುಸುಮನ ಬಗ್ಗೆ ಮಾಹಿತಿ ಇದ್ದಿರಬಹುದು. ನಾನು ಹಾಗೂ ಸಾಕ್ಷಿದಾರರು ಅಕ್ಕ ಪಕ್ಕದ ಗ್ರಾಮದವರು ಅಂದರೆ 15 ಕಿಮಿ ದೂರದಲ್ಲಿರುವ ಗ್ರಾಮದವರು. ನಾನು ವಕೀಲ ವೃತ್ತಿಯಲ್ಲಿರುವ ಕಾರಣ ಸದರಿ ಸಾಕ್ಷಿದಾರರ ಪರಿಚಯವು ನನಗೆ ಬಹಳಾ ವರ್ಷಗಳಿಂದ ಇದೆ ಅಂದರೆ ಸರಿಯಲ್ಲ. ವಿಲ್ಲನ್ನು ಬರೆದಿರುವ ಬಸವರಾಜಪ್ಪ ಇವರು ಪತ್ರ ಬರಹಗಾರರು ಆಗಿರುವರು. ಅವರು ಮಾದಿಹಳ್ಳಿ ಗ್ರಾಮದವರು. ನಾನು ಹಾಗೂ ಬಸವರಾಜಪ್ಪ ಇವರು ದೂರದ ಸಂಬಂದಿಗಳು ಅಂದರೆ ಸರಿಯಲ್ಲ. ನಮ್ಮೂರಿಗೆ ಅವರ ಊರಿಗೂ ಬಿಗತನಗಳು ಬಹಳಾ ಆಗಿವೆ ಅಂದರೆ ಆಗಿರಬಹುದು. ಅವರು ನಮ್ಮ ಸಂಬಂದಿಕರಾಗಿದ್ದರೂ ಸಹ ಸಂಬಂದವನ್ನು ನಿರಾಕರಿಸುತ್ತಿದ್ದೇನೆ ಅಂದರೆ ಸರಿಯಲ್ಲ.

ವಿಲ್ಲು ಬರೆದ ನಂತರ 8-9 ತಿಂಗಳ ಒಳಗಾಗಿ ಕುಸುಮ ಮೃತ ಪಟ್ಟಳು. ನಾನುಮುಖ ವಿಚಾರಣೆಯಲ್ಲಿ ಹೇಳಿದಂತೆ ಕುಸುಮಾ ಇವರು ವಿಲ್ಲು ಬರೆದ 3-4 ತಿಂಗಳ ಒಳಗಾಗಿ ತೀರಿಕೊಂಡಿರುವುದಿಲ್ಲ. ಕುಸುಮಾ ಇವರು 12.02.2015 ರಂದು ಮೃತ ಪಟ್ಟಿರುವರು. ಆಕೆ 29.09.2014 ರಂದು ವಿಲ್ಲನ್ನು ಬರೆಸಿರುವಳು ಎಂದು ನನ್ನ

ಮುಖ್ಯ ವಿಚಾರಣೆಯಲ್ಲಿ ಬರೆಸಿದ್ದೇನೆ ಅಂದರೆ ಸರಿ. ಕುಸುಮಾ ಇವರು ನನ್ನ ಪತ್ನಿ ಲೀಲಾ ಅವರಿಗೆ ಬರೆಯುವ ಬದಲಾಗಿ ನನ್ನ ಹೆಸರಿಗೆ ಯಾಕೆ ವಿಲ್ಲು ಮಾಡಿದರು ಎಂದು ನನಗೆ ಗೊತ್ತಿಲ್ಲ. ಕುಸುಮಾ ಇವರಿಗೆ ನನ್ನ ಪತ್ನಿಯ ಮೇಲೆ ಅಪಾರವಾದ ಪ್ರಿತಿ ವಿಶ್ವಾಸ ಇತ್ತು ಅಂದರೆ ಸರಿ.

ನಾನು ವಕೀಲನಾಗಿರುವ ಕಾರಣ ನನ್ನ ನಿರ್ದೇಶನದ ಮೇಲೆ ಆ ವಿಲ್ಲನ್ನು ತಯಾರು ಮಾಡಿಸಿದ್ದೇನೆ ಅಂದರೆ ಸರಿಯಲ್ಲ. ಆಕೇ ಆರೋಗ್ಯವಾಗಿದ್ದ ಕಾರಣ ವಿಲ್ಲು ಬರೆಯ ಪ್ರಶ್ನೆ ಉದ್ಭವಆಗುವುದಿಲ್ಲ ಅಂದರೆ ಸರಿಯಲ್ಲ. ಕುಸುಮಾರವರು ಈ ವಿಲ್ಲನ್ನು ಸ್ವಂತ ಇಚ್ಚೆಯಿಂದ ಬರೆದುಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಆಕೆ ಆಕೆಯ ಗಂಡ ಮೃತ ಪಟ್ಟ ನಂತರ ನಮ್ಮೊಂದಿಗೆ ವಾಸ ಇದ್ದರು ಎಂದು ಸುಳ್ಳು ಹೇಳುತ್ತಿದ್ದೆನೆ ಅಂದರೆ ಸರಿಯಲ್ಲ. ಆಕೆಗೆ ಯಾರು ವಾರಸುದಾರರು ಇಲ್ಲ ಎಂಬ ವಿಚಾರವನ್ನು ದುರುಪಯೋಗ ಪಡಿಸಿಕೊಂಡು ನಾನು ಈ ವಿಲ್ಲನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

18-07-2025

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**